

# ಮಾಸಲು ದಿಕ್ಕು

■ ಅನು ಬೆಳ್ಳೆ

## ಲಹರಿ ಕಣ್ಮರೆ ಬಗ್ಗೆ ಚರ್ಚೆ

ಇನ್ಸ್‌ಪೆಕ್ಟರ್ ರಾಜಧಾನಿಯ ತಲೆಯಲ್ಲಿ ಸಂಗ್ರಹವಾದ ವಿಷಯಗಳು ವೇಗವಾಗಿ ತಿರುಗತೊಡಗಿದವು. ನಾಲ್ಕೈದು ವಿಷಯಗಳು ಘನವಸ್ತು ನೀರಿನಲ್ಲಿ ಕರಗದಂತೆ ಮೆದುಳಿನ ಮಡಕೆಯಲ್ಲಿ ಸ್ಥಿರವಾಗಿ ಕುಳಿತವು. ಮೇನಕಾಗೆ ಮನಸ್ಸು ಬಂದಾಗ ಹುಟ್ಟುಹಬ್ಬ ಆಚರಿಸುವ ಗೀಳೇಕೆ? ಕಾಶಮ್ಮನನ್ನು ಮಹಡಿಯಿಂದ ಕೆಳಗಿಳಿಯದಂತೆ ಬಂಧನದಲ್ಲಿರಿಸಿರುವ ಉದ್ದೇಶವೇನು? ಮೈಲು ದೂರದ ಫಾರ್ಮ್ ಹೌಸ್‌ನಲ್ಲಿ ನಡೆಯುವುದೇನು? ಭುಜಂಗೇಶರಾಯರು ಮೂರು ದಿನಗಳು 'ಮೇನಕಾ'ದಿಂದ ದೂರವಿರುವುದೇಕೆ? ಲಹರಿಯ ಮಾತೆತ್ತಿದರೆ ಮೇನಕಾ ಉರಿದು ಬೀಳುವುದೇಕೆ? ತಾನು ಸಂಗ್ರಹಿಸಿದ ವಿಷಯಗಳ ಜೊತೆಗೆ ತಾಳೆ ಹಾಕಿಕೊಂಡ. ಇಲ್ಲಿಯವರೆಗೆ ಅವನ ಗಮನಕ್ಕೆ ಬರದ ವಿಷಯಗಳು ಅದರಲ್ಲಿ ಸೇರಿಕೊಂಡಿದ್ದವು. ಮನೆಯಲ್ಲಿ ಯಾರು ಇಲ್ಲದಿರುವುದು ಅನುಕೂಲವೇ ಆಗಿತ್ತು.

'ನಿಮ್ಮನು ಯಾಕೆ ಮಹಡಿಯಲ್ಲಿರುವಂತೆ ಹೇಳ್ತಾರೆ. ನೀವು ಈ ಮನೆಯ ಯಜಮಾನಿಯಲ್ಲವೆ?'

ಇನ್ಸ್‌ಪೆಕ್ಟರ್ ನ ಮಾತಿಗೆ ಕಾಶಮ್ಮನ ಕಣ್ಣುಗಳು ತುಂಬಿ ಬಂದವು.

'ಲಹರಿ ಕಾಣೆಯಾಗಿಂದಿನಿಂದ ಅವರಿಗೆ ನನ್ನ ಮೇಲೆ ಸಿಟ್ಟು. ನಾನೇ ಅವಳಿಗೆ ಸ್ವಾತಂತ್ರ್ಯ ಕೊಟ್ಟೇಂತ ಅನುಮಾನ. ಅದಕ್ಕೆ ನಾನು ಕೆಳಗಿದ್ರೆ ಇನ್ನಷ್ಟು ಅವಘಡಗಳಾಗುತ್ವೆ ಅನ್ನುವ ಆತಂಕ ಅವರಿಗೆ'

ಅಧಿಕಾರಿ ರಾಜಧಾನಿ ಈಗಾಗಲೇ ಕಾಶಮ್ಮನಿಂದ ಕೆಲವು ಮಾಹಿತಿಗಳನ್ನು ಪಡೆದಿದ್ದ. ಹಾಗಾಗಿ ಮತ್ತೆ ಮತ್ತೆ ಅವನ್ನು ಕೇಳಿ ಅವರ ಚಿತ್ತ ಕೆಡಿಸುವುದು ಬೇಡವೆನಿಸಿತು.

'ಸರಿ, ನಿಮ್ಮಿಂದ ನಮಗೆ ಇನ್ನಷ್ಟು ಮಾಹಿತಿಗಳು ದೊರೆತ್ವು. ಲಹರಿಯನ್ನು ಇನ್ನು ಪತ್ತೆ ಹಚ್ಚೋದು ಕಷ್ಟವಲ್ಲ. ನೀವೇನು ಭಯಪಡ್ಬೇಡಿ. ನಾವು ನಿಮ್ಮ ಸಹಾಯಕ್ಕಿದ್ದೇವೆ' ಇಲಾಖೆಯ ಕರ್ತವ್ಯದಲ್ಲಿರುವಾಗ ಬಳಸುವ ಪದಗಳನ್ನು ಹೇಳಿ ಅವರನ್ನು ಸಾಂತ್ವನಗೊಳಿಸಿದ.

'ಇರಿ, ಬಂದೆ' ಕಾಶಮ್ಮ ಅವರನ್ನು ಕುಳಿತಿರುವಂತೆ ಹೇಳಿ ಒಳಗೆ ನಡೆದು ಕೆಲಸದಾಳುವನ್ನು ಕರೆದು ಬಿಸಿ ಚಹಾ ಒಂದಷ್ಟು ಕರಿದ ತಿಂಡಿಗಳನ್ನು ತರಿಸಿದರು.

ಪಿಸಿಯ ಮುಖ ಮಾತ್ರ ಬಿಮ್ಮನೆ ಇತ್ತು. ಈ ಹಿಂದೆ ಅಧಿಕಾರಿ ಒಬ್ಬನೇ ಇಲ್ಲಿಗೆ ಬಂದು ಹೋಗಿರುವುದರಿಂದ ತನಗೇನು ಮಾಹಿತಿ ಸಿಗಲಿಲ್ಲವೆನ್ನುವ ಕೊರಗಿತ್ತು. ಅಧಿಕಾರಿ ತನಗೆ ಅದೆಲ್ಲವನ್ನು ಹೇಳಿದ್ದರೆ ಅನುಕೂಲವಾಗಿರುತ್ತಿತ್ತು. ತಾನು ಕೂಡ ಸ್ವಲ್ಪ ತಲೆಯನ್ನು ಓಡಿಸಬಹುದಿತ್ತು ಅನಿಸದಿರಲಿಲ್ಲ.

ಇನ್ಸ್‌ಪೆಕ್ಟರ್ ಗೆ ತಕ್ಷಣ ಏನೋ ಹೊಳೆಯಿತು. ಅವನು ಎದ್ದು ನಿಂತು ಹಜಾರ ದಾಟಿ ಮುಂದಕ್ಕೆ ನಡೆದ. ಕಾಶಮ್ಮನೇನೂ ಅವನನ್ನು ಪ್ರಶ್ನಿಸಲಿಲ್ಲ. ಅವರಿಗೆ ಆತ ಎಲ್ಲಿಗೆ ಹೋಗುವನೆನ್ನುವುದು ಗೊತ್ತು.

ಅಧಿಕಾರಿ ಹಜಾರ ದಾಟಿ ಲಹರಿಯ ಕೋಣೆಯನ್ನು ನೋಡಲು ಮಹಡಿಯ ಮೆಟ್ಟಿಲುಗಳನ್ನು ಏರಿದ. ಕೋಣೆಯ ಮಗ್ಗುಲಿನ ಹಾಲ್‌ನಂತಹ ತೆರೆದ ಭಾಗದಿಂದ ದಾಟುವ ಎದುರಿಗಿನ ಗೇಟಿನಿಂದ ಹೊರಗಿನ ಮಣ್ಣಿನ ರಸ್ತೆ ಸ್ಪಷ್ಟವಾಗಿ ಗೋಚರಿಸುತ್ತಿತ್ತು. ಅವನು ಲಹರಿಯ ಕೋಣೆಯೊಳಗೆ ಪ್ರವೇಶಿಸಬೇಕೆನ್ನುವಷ್ಟರಲ್ಲಿ ಕೆಳಗೆ ಗದ್ದಲ ಕೇಳಿತು. ತಕ್ಷಣವೆ ಕೆಳಗೆ ಧಾವಿಸಿದ!